**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 401/2023**

| | | | |
|---|---|---|---|
| ಹೆಸರು | | ಶ್ರೀ ಲೊಕೇಶ್ | ಚಾಸಾಃ 05 |
| ತಂದೆ ಹೆಸರು | | ಶ್ರೀ ಗೊಜ್ಜನಾಯಕ | ಫ್ರಾಸಾಃ 02 |
| ವಯಸ್ಸು | | 41 ವರ್ಷ | ಸಾಕ್ಷಿಯನ್ನು ದಿನಾಂಕಃ 23.06.2026 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವ್ಯವಸಾಯ | |
| ವಾಸ | | ಹೊರೆಯಾಲ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಚಾಸಾ–1 ರವರು ನನಗೆ ಗೊತ್ತು. ಚಾಸಾ–2 ಮತ್ತು 3 ರವರು ನನಗೆ ಗೊತ್ತು. ಸಾಕ್ಷಿಯು ನಿಪಿ2 ರಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 01.01.2022 ರಂದು ಮಹದೇವಪ್ಪರವರ ಜಮೀನಿನ ಹತ್ತಿರ ಮಹಜರ್ ಮಾಡುವ ಕಾಲಕ್ಕೆ ಮಾಡಿರುತ್ತೇನೆ. ಚಾಸಾ–1 ರಮರ ಅಪಘಾತವಾದ ಸ್ಥಳವನ್ನು ತೋರಿಸಿದರು. ಆಗ ಸಮಯ ಸಂಜೆ 4.00 ರಿಂದ 4.30 ಆಗಿತ್ತು. ಆ ಕಾಲಕ್ಕೆ ಚಾಸಾ–4 ರವರು ಹಾಜರಿದ್ದರು. ಆ ಕಾಲಕ್ಕೆ ನಿಪಿ3 ಮತ್ತು 4 ರಂತೆ ಫೋಟೋ ತೆಗೆದರು. ಸಾಕ್ಷಿಯು ನಿಪಿ5 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ5(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಠಾಣೆಯಲ್ಲಿ ಅಪಘಾತಕ್ಕೆ ಒಳಗಾದ ವಾಹನಗಳ ಅಮಾನತ್ತು ಮಹಜರ್ ಕಾಲಕ್ಕೆ ಮಾಡಿರುತ್ತೇನೆ. ಆ ಕಾಲಕ್ಕೆ ನಿಪಿ6 ರಂತೆ ಫೋಟೋ ತೆಗೆದರು. ಅಪಘಾತಕ್ಕೆ ಒಳಗಾದ ವಾಹನಗಳನ್ನು ನೋಡಿದರೆ ಗುರುತಿಸಬಲ್ಲೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 01.12.2024 ರಂದು ಮದ್ಯಾಹ್ನ 3.00 ರಿಂದ 3.45 ರವರಿಗೆ ನನ್ನ ಮತ್ತು ಇತರ ಸಾಕ್ಷಿದಾರರ ಸಮಕ್ಷಮ ಘಟನಾ ಸ್ಥಳದಲ್ಲಿ ಮಹಜರ್ ಮಾಡಿದರು ಎಂದರೆ ಸರಿ. ಅದೇ ದಿನ ಠಾಣಾ ಆವರಣದಲ್ಲಿ ಚಾಸಾ–1 ರವರು ಅಪಘಾತಕ್ಕೆ ಒಳಗಾದ ವಾಹನ ಕೆಎ–10–ಇಡಿ–5196 ಕಪ್ಪು ಬಣ್ಣದ ಸ್ಲೆಂಡರ್ ಪ್ಲೆಸ್ ದ್ವಿ–ಚಕ್ರ ವಾಹನವನ್ನು ಹಾಜರುಪಡಿಸಿದ ಮೇರೆಗೆ ನನ್ನ ಮತ್ತು ಚಾಸಾ–5 ರವರ ಸಮಕ್ಷಮ ಸಂಜೆ 4.30 ರಿಂದ 5.00 ರವರೆಗೆ ನಿಪಿ5 ರಂತೆ ಅಮಾನತ್ತು ಮಹಜರ್ ಮಾಡಿದರು ಎಂದರೆ ಸರಿ. ನಿಪಿ2 ಮತ್ತು 6 ರ ವಿಷಯ ತಿಳಿದು ನಿಪಿ2 ಮತ್ತು 5 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ  ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**